**ಸಾಕ್ಷಿಯನ್ನು ದಿನಾಂಕ 19.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನಿ.ಪಿ.*1* ಚೆಕ್ ನ ಒಕ್ಕಣೆಗಳನ್ನು ಆರೋಪಿಯೇ ಬರೆದುಕೊಟ್ಟಿದ್ದಾರೆ. ನಿ.ಪಿ.1ರಲ್ಲಿ ಒಕ್ಕಣಿಗೆಯ ಬರವಣಿಗೆಗೂ ಮತ್ತು ಶಾಯಿಗೂ ಹಾಗೂ ಸಹಿಯ ಶಾಯಿಗೂ ವ್ಯತ್ಯಾಸ ಇದೆ ಎಂದರೆ ಅವರನ್ನೇ ಕೇಳಬೇಕು ಎಂದು ನುಡಿದಿರುತ್ತಾರೆ. ದಿನಾಂಕಃ17.05.2024ರಂದು ನಿ.ಪಿ.1 ಚೆಕ್ ಅನ್ನು ನಗದೀಕರಣಕ್ಕೆ ಸಲ್ಲಿಸಿದ್ದೆ. ಸದರಿ ಚೆಕ್ ಮರುದಿನಾಂಕದಂದು ವಾಪಸ್ಸಾಗಿರುತ್ತದೆ. ದಿನಾಂಕಃ17.05.2024ರಂದೇ ಚೆಕ್ ವಾಪಸ್ಸಾಗಿರುತ್ತದೆ ಎಂದರೆ ಇರಬಹುದು ನಾನು ಮರುದಿನಾಂಕ ಪಡೆದುಕೊಂಡೆ.

10. ನಾನು ಆರೋಪಿಗೆ ನೋಟೀಸು ದಿನಾಂಕ18.06.2024 ಎಂದರೆ ಸರಿ. ಮೇ ತಿಂಗಳಲ್ಲಿ 31 ದಿನ ಇರುವ ಕಾರಣ ನಾನು 30ದಿನಗಳ ಒಳಗೆ ಲೀಗಲ್ ನೋಟೀಸನ್ನು ಕೊಟ್ಟಿಲ್ಲ ಎಂದರೆ ಅದು ನಮ್ಮ ವಕೀಲರನ್ನು ಕೇಳಬೇಕು ಎಂದು ನುಡಿದಿರುತ್ತಾರೆ. ನಿ.ಪಿ.5 ರಲ್ಲಿ ಅಡ್ರೆಸ್ಸಿ ಲೆಫ್ಟ್ ಎಂದು ವಾಪಸ್ಸಾಗಿರುತ್ತದೆ ಎಂದರೆ ಹೌದು. ಮುಂದುವರೆದು ಅದೇ ವಿಳಾಸದಲ್ಲಿ ಆರೋಪಿ ಇದ್ದಾರೆ ಎಂದು ನುಡಿದಿರುತ್ತಾರೆ. ನನ್ನ ಮತ್ತು ಆರೋಪಿಯ ನಡುವೆ ರೆಕಾರ್ಡ್ ಮಾಡಿರುವ ಸಂಭಾಷಣೆಯನ್ನು ನ್ಯಾಯಾಲಯಕ್ಕೆ ಕೊಡುತ್ತೇನೆಂದು ಹಿಂದಿನ ಪಾಟೀಸವಾಲಿನಲ್ಲಿ ಹೇಳಿದ್ದು ಅದನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ, ಕೊಡುತ್ತೇನೆ. ನನ್ನ ಹೆಂಡತಿ ಅನುಸೂಯಾ ಮತ್ತು ದೀಪಗೌಡ ನಡುವೆ ಹಣಕಾಸಿನ ಸಂಬಂಧ ಇದ್ದು ಆ ಕಾರಣ ನಾನು ಒತ್ತಾಯ ಮಾಡಿ ಆರೋಪಿಯ ಕಡೆಯಿಂದ ನಿ.ಪಿ.1 ಚೆಕ್ ಅನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ಚೆಕ್ ಅನ್ನು ನಾನೇ ತುಂಬಿಸಿದ್ದೇನೆ ಎಂದರೆ ಸುಳ್ಳು.

11. ಆರೋಪಿಯು ದೀಪಗೌಡ ಅವರನ್ನು ನನ್ನ ಹೆಂಡತಿಗೆ ಪರಿಚಯ ಮಾಡಿಸಿಕೊಟ್ಟಿರುವುದು ಹೊರತುಪಡಿಸಿ ಯಾವುದೇ ಹಣಕಾಸಿನ ವ್ಯವಹಾರ ನಮ್ಮೊಂದಿಗೆ ಮಾಡಿಲ್ಲ ಎಂದರೆ ಸುಳ್ಳು. ದೀಪಗೌಡ ಅವರು ಮೃತಪಟ್ಟ ನಂತರ ಆರೋಪಿಯ ಕಡೆಯಿಂದ ನಾವು ಒತ್ತಾಯ ಮಾಡಿ ಚೆಕ್ ಅನ್ನು ನಾವು ಪಡೆದಿರುತ್ತೇವೆಂದು ಆರೋಪಿ ನಮ್ಮ ಮೇಲೆ ಪೊಲೀಸ್ ದೂರನ್ನು ನೀಡಿರುತ್ತಾರೆ ಎಂದರೆ ಸುಳ್ಳು. ಮುಂದುವರೆದು ಅವರು ಕೊಟ್ಟಿರುವ ಪೊಲೀಸ್ ದೂರಿನ ಪ್ರತಿ ನನ್ನ ಬಳಿ ಇದೆ, ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಬಲ್ಲೆ. ದಿನಾಂಕಃ01.08.2025ರಂದು ಆರೋಪಿಯು ಡೆಪ್ಯುಟಿ ಕಮೀಷನರ್ ಗೆ ನನ್ನ ಮೇಲೆ ದೂರು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2022ರಲ್ಲಿ ಇನ್ಸ್ ಪೆಕ್ಟರ್ ದಿನೇಶ್ ಅವರು ಈ

ಪ್ರಕರಣವನ್ನು ರಾಜಿ ಮಾಡಿಕೊಳ್ಳಿ ಎಂದು ತಿಳಿಸಿರುತ್ತಾರೆ ಎಂದರೆ ಹೌದು, ಆದರೆ ಆರೋಪಿಯು ಯಾವುದೇ ರಾಜಿಗೆ ಬಂದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯ ಕಡೆಯಿಂದ ಒತ್ತಾಯವಾಗಿ ಪಡೆದಿರುವ ಚೆಕ್ ಅನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 2023ರಲ್ಲಿ ಆರೋಪಿಗೆ ನಾನು ನನ್ನಪಿರ್ಯಾದಿಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೀತಿ ಯಾವುದೇ ದುಡ್ಡನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ, ಆದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**